ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ : ಇಡಿ/ಕೆಇಎ/ಕೆಸೆಟ್/2022-23

ದಿನಾಂಕ : 28.03.2024

**ಪ್ರಕಟಣೆ**

**ಕೆಸೆಟ್-2023ರ ಪರೀಕ್ಷೆಯ ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸುವ ಬಗ್ಗೆ**

ಪ್ರಾಧಿಕಾರದಿಂದ ದಿನಾಂಕ 13.01.2024 ರಂದು 42 ವಿವಿಧ ವಿಷಯಗಳ ಪತ್ರಿಕೆಗಳಿಗೆ ಕೆಸೆಟ್-2023 ಪರೀಕ್ಷೆಯನ್ನು ನಡೆಲಾಗಿತ್ತು. ಈ ಪತ್ರಿಕೆಗಳಿಗೆ ಸಂಬಂಧಿಸಿದಂತೆ ಕೀ ಉತ್ತರಗಳನ್ನು ದಿನಾಂಕ 29.01.2024 ರಂದು ಪ್ರಕಟಿಸಿ ದಿನಾಂಕ 07.02.2024 ರ ವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿತ್ತು. ಕೆಲವು ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಸಲ್ಲಿಸಲು ಹೆಚ್ಚಿನ ಕಾಲಾವಾಶ ಕೋರಿದ ಹಿನ್ನಲೆಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ 17.02.2024 ರ ವರೆಗೆ ದಿನಾಂಕ ವಿಸ್ತರಿಸಲಾಗಿತ್ತು.

ಅದರಂತೆ ಪ್ರಾಧಿಕಾರದಲ್ಲಿ 23 ಪತ್ರಿಕೆಗಳ ಆಯ್ದ ಕೀ ಉತ್ತರಗಳಿಗೆ ಮಾತ್ರ ಆಕ್ಷೇಪಣೆಗಳು ಸ್ವೀಕೃತವಾಗಿದ್ದವು. ಒಟ್ಟು 22 ಪತ್ರಿಕೆಗಳಿಗೆ ಕೆಲವು ಕೀ ಉತ್ತರಗಳಿಗೆ ಮಾತ್ರ ವಿಷಯ ತಜ್ಞರು ಬದಲಾವಣೆಗಳನ್ನು ಸೂಚಿಸಿದ್ದು, ಒಂದು ವಿಷಯದ ಪತ್ರಿಕೆಯಲ್ಲಿ ಆಕ್ಷೇಪಣೆಗಳೆದುರಾಗಿ ಯಾವುದೇ ಬದಲಾವಣೆಗಳನ್ನು ಸೂಚಿಸಿರುವುದಿಲ್ಲ ಹಾಗೂ ಉಳಿದ 19 ಪತ್ರಿಕೆಗಳಿಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದ ಕಾರಣ ಕೀ ಉತ್ತರಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ಆಕ್ಷೇಪಣೆಗಳು ಸ್ವೀಕೃತವಾದ 23 ಪತ್ರಿಕೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ವಿಷಯ ತಜ್ಞರ ಸಮಿತಿಗಳ ಮೂಲಕ ಪರಿಶೀಲಿಸಲಾಯಿತು. ಅವುಗಳಲ್ಲಿ ಮನಃಶಾಸ್ತ್ರ ವಿಷಯವನ್ನು ಹೊರತು ಪಡಿಸಿ ಉಳಿದ 22 ಪತ್ರಿಕೆಗಳಲ್ಲಿ ವಿಷಯ ತಜ್ಞರ ಸಮಿತಿಗಳು ನೀಡಿದ ಶಿಫಾರಸ್ಸಿನಂತೆ ಕೆಲವು ಕೀ ಉತ್ತರಗಳು ಬದಲಾವಣೆಗೊಂಡಿದ್ದು, ಸದರಿ ಪರಿಷ್ಕೃತ ಕೀ ಉತ್ತರಗಳನ್ನು ಪ್ರಕಟಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in